# ಕಠೋರ ಸತ್ಯಾಗ್ರಹಿ

ಈತನನ್ನು ಜಗತ್ತು 'ಮಹಾತ್ಮ', 'ಸಂತ' ಎಂದು ಕರೆಯುತ್ತದೆ. ಆದರೆ ಇದಾವುದರ ಬಗ್ಗೆಯೂ ಮೋಹವಿಲ್ಲದ ಈತ ತನ್ನನ್ನು ಸಂತನೆಂದು ಭಾವಿಸಿರಲಿಲ್ಲ. ಆದರೆ ನಾನು ದೇವರ ಸೇವಕ ಎಂದು ನಮ್ರತೆಯಿಂದ ಹೇಳಿದ. ಸರಳತೆ, ಮಾನವಪ್ರೇಮ, ಬೇರೆಯವರನ್ನು ನೋಯಿಸದ ಬದುಕು, ಶೋಷಣೆಗೆ ಬದಲು ಸೇವೆಯ ದೃಷ್ಟಿ ಈ ತತ್ವಗಳನ್ನು ಅಳವಡಿಸಿಕೊಂಡು ತನ್ನ ಜೀವಿತದುದ್ದಕ್ಕೂ ಸತ್ಯದ ಅನ್ವೇಷಣೆಯಲ್ಲಿಯೇ ತೊಡಗಿಸಿಕೊಂಡ ವ್ಯಕ್ತಿ. ಈತನ 'ನನ್ನ ಸತ್ಯಾನ್ವೇಷಣೆಯ ಕಥೆ' ಕೃತಿ ಆತನ ಬದುಕಿನ ಪ್ರತಿಯೊಂದು ಘಟನೆಯೂ ಸತ್ಯಾನ್ವೇಷಣೆಯ ಪ್ರಯೋಗಶೀಲತೆಯನ್ನೇ ಹೇಳುತ್ತದೆ. ಹಾಗೆಯೇ ಈ ಆತ್ಮಕಥೆ ಆತನ ಅಂತರಂಗದಲ್ಲಿದ್ದ ಬೇರೆ ಬೇರೆ ಸಾಧ್ಯತೆಗಳನ್ನು ಹೇಳುತ್ತದೆ.

ಈತನನ್ನು ಚತುರ ರಾಜಕಾರಣಿ ಎಂದು ಕರೆಯುವುದು ಅರ್ಧಸತ್ಯ ಮಾತ್ರ! ಆತನೊಳಗೆ ಗ್ರಾಮಸ್ವರಾಜ್ಯ, ಆರ್ಥಿಕ ವಿಚಾರ, ಶಿಕ್ಷಣ, ಸ್ವದೇಶಿ ವಸ್ತುಗಳ ಬಳಕೆ, ಸರಳ ಜೀವನ, ಪ್ರಜಾಪ್ರಭುತ್ವ, ಧರ್ಮ, ಸತ್ಯ, ಅಹಿಂಸೆ, ಚರಕ ಇಂತಹ ಮೂರ್ತ ವಿಚಾರಗಳ ಬಗ್ಗೆ ಖಚಿತವಾದ ನಿಲುವುಗಳಿದ್ದವು. ಗ್ರಾಮಭಾರತ ಪ್ರಜಾಪ್ರಭುತ್ವದ ಮೂಲ ಅಡಿಪಾಯ ಎಂದು ಹೇಳಿದ ಈತ ನೈಸರ್ಗಿಕ ಅರ್ಥವ್ಯವಸ್ಥೆಗೆ ನಾವು ಹಿಂದಿರುಗಬೇಕು ಎಂದು ಹೇಳಿ, ಆರ್ಥಿಕ ಸಮಾನತೆ ಅಹಿಂಸಾತ್ಮಕ ಸ್ವಾತಂತ್ರ್ಯಕ್ಕೆ ಬಾಗಿಲನ್ನು ತೆರೆಯುತ್ತದೆ ಎಂದು ಅದನ್ನೇ ಪುನರುಚ್ಚರಿಸುತ್ತಿದ್ದ. ಪರಮ ಅಹಿಂಸಾ ಮೂರ್ತಿಯಾಗಿದ್ದ ಈತ 'ಭಾರತಕ್ಕೆ ಅಹಿಂಸಾ ಮಾರ್ಗವಲ್ಲದೆ ಬೇರಾವುದೂ ಸೂಕ್ತವಲ್ಲ' ಎಂದು ಹೇಳಿ 'ಅಹಿಂಸಾ ಮಾರ್ಗ'ವೇ ಈ ಯುಗದ ಚಿಹ್ನೆ ಎಂದೂ ಸಾರಿದ.

ಈತನ 'ಹಿಂದ್ ಸ್ವರಾಜ್' ಆಧುನಿಕ ಭಾರತದ ವಿವಿಧ ಮುಖಗಳನ್ನು ಕುರಿತ ಸಂವಾದದ ರೂಪದಲ್ಲಿರುವ ನಿರ್ಭೀತ ವಿಮರ್ಶೆಯ ಕೃತಿ. ನಾಗರಿಕತೆಯ ಕೆಡುಕುಗಳನ್ನು ಚರ್ಚಿಸುವ ಇದನ್ನು ಭಾರತದ ಉತ್ಕೃಷ್ಟ ಕೃತಿಯೆಂದು ಹೆಸರಿಸುತ್ತಾರೆ. ಈ ದೇಶದ ಹಿಂದೂ ಮುಸ್ಲಿಂರಿಗೆ ಸಂಬಂಧಿಸಿದ ಗಂಭೀರ ಚರ್ಚೆಯೂ ಈ ಕೃತಿಯಲ್ಲಿದೆ. ತನ್ನ ಕೃತಿಯನ್ನು ಕುರಿತು 'ಈ ಪುಸ್ತಕವನ್ನು ಎಳೆಯ ಮಗುವಿಗೂ ಕೊಡಬಹುದು. ಇದು ದ್ವೇಷಕ್ಕೆ ಬದಲು ಪ್ರೀತಿಯನ್ನು ಬೋಧಿಸುತ್ತದೆ, ಹಿಂಸೆಗೆ ಬದಲು ಪ್ರೀತಿಯನ್ನು ಬೋಧಿಸುತ್ತದೆ, ಹಿಂಸೆಗೆ ಬದಲು ಆತ್ಮತ್ಯಾಗವನ್ನು ಕಲಿಸುತ್ತದೆ. ಪಶುಬಲಕ್ಕೆ ವಿರುದ್ಧವಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ' ಎಂದು ಹೇಳಿದ. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಈತ ಟಾಲ್‌ಸ್ಟಾಯ್ ಮತ್ತು ಥೋರೋ ಅವರ ಚಿಂತನೆಗಳಿಂದ ಪ್ರಭಾವಿತನಾಗಿ ಶಿಕ್ಷಣ ಕೇಂದ್ರವೊಂದನ್ನು ಸ್ಥಾಪಿಸಿ ಶಿಕ್ಷಕನೂ ಆದ. ಇಲ್ಲಿ ಯಾರೂ ಯಜಮಾನರಲ್ಲ, ಇಲ್ಲಿ ಯಾರೂ ಸೇವಕರಲ್ಲ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕು ಎನ್ನುವ ನಿಯಮಾನುಸಾರ ಅಲ್ಲಿ ಎಲ್ಲವೂ ನಡೆಯುತ್ತಿತ್ತು. ಈತ ಸ್ಥಾಪಿಸಿದ ಮೊದಲ ಆಶ್ರಮ ಇದು.

ಧರ್ಮಭೀರುವಾಗಿದ್ದ ಈತ 'ನೀತಿಯೇ ಧರ್ಮದ ತಿರುಳು' ಎಂದು ಹೇಳಿದ. ಆದರೆ ಎಂದೂ ಗೊಡ್ಡು ಸಂಪ್ರದಾಯವಾದಿಗಳಂತೆ ಜೀವಿಸಲಿಲ್ಲ. ಒಮ್ಮೆಯೂ ದೇವಾಲಯಗಳ ಮೆಟ್ಟಿಲು ತುಳಿಯದ ಈತ ಒಮ್ಮೆ ಉಡುಪಿಗೆ ಬಂದಾಗ ಅಲ್ಲಿನ ಪ್ರಖ್ಯಾತ ಕೃಷ್ಣದೇವಾಲಯಕ್ಕೂ ಹೋಗಲಿಲ್ಲ! 'ಹರಿಜನರಿಗೆ ಪ್ರವೇಶವಿಲ್ಲದ ಯಾವುದೇ ದೇವಾಲಯಗಳಿಗೆ ನಾನು ಹೋಗುವುದಿಲ್ಲ' ಎಂದು ನಿಷ್ಠುರವಾಗಿ ಹೇಳಿದ. 'ದೇವರನ್ನು ಹುಡುಕುವುದಕ್ಕಾಗಿ ಯಾತ್ರೆ ಹೋಗಬೇಕಾಗಿಲ್ಲ. ದೇವತಾ ವಿಗ್ರಹದ ಮುಂದೆ ದೀಪ ಹಚ್ಚುವುದು, ಧೂಪ ಹಾಕುವುದು, ಅಭಿಷೇಕ ಮಾಡುವುದು ಅವಶ್ಯವಿಲ್ಲ, ಏಕೆಂದರೆ ಅವನು ನೆಲೆಸಿರುವುದು ನಮ್ಮ ಹೃದಯಗಳಲ್ಲಿ' ಎಂದು ಹೇಳಿ ಅಹಿಂಸೆ ಎನ್ನುವುದೇ ಅನಂತ ಪ್ರೇಮವೆಂದು ಜಗತ್ತಿಗೆ ಸಾರಿ ಕೊನೆಗೆ ಮತಾಂಧನೊಬ್ಬನ ಹಿಂಸೆಗೆ ಬಲಿಯಾದ ನಿಸ್ವಾರ್ಥ ಸತ್ಯಾಗ್ರಹಿ. ಆಶ್ಚರ್ಯದ ಮಾತೆಂದರೆ, ಜಗತ್ತಿನಲ್ಲಿ ಬುದ್ಧದೇವನಿಗಿರುವಷ್ಟೆ ಅನುಯಾಯಿಗಳು ಈತನಿಗೂ ಇದ್ದಾರೆ ಎನ್ನುವುದು.

ನೈತಿಕ ಮತ್ತು ಅಹಿಂಸಾ ಮಾರ್ಗದಲ್ಲಿಯೇ ಎಲ್ಲ ಹೋರಾಟಗಳು ನಡೆಯಬೇಕು ಎಂದು ದೃಢವಾಗಿ ನಂಬಿದ್ದ ಕಠೋರ ಸತ್ಯಾಗ್ರಹಿ ಈತ. ಮಹಾತ್ಮನ ಅಹಿಂಸೆ ಮತ್ತು ಸತ್ಯಾಗ್ರಹದ ತತ್ವಾದರ್ಶಗಳ ಅಡಿಪಾಯದ ಮೇಲೆಯೇ ದೇಶದ ಅನೇಕ ಹೋರಾಟಗಳು ನಡೆದಿವೆ. ಈಚೆಗೆ ದೆಹಲಿಯಲ್ಲಿ 1000 ದಿನಗಳಿಗೂ ಹೆಚ್ಚು ಕಾಲ ನಡೆದ ಬೃಹತ್ ರೈತ ಚಳವಳಿ ಮಹಾತ್ಮ ತೋರಿದ ಅಹಿಂಸೆಯ ಹಾದಿಯಲ್ಲಿಯೇ ನಡೆದದ್ದು ಈಗ ಇತಿಹಾಸ. 1952ರಲ್ಲಿ ಸಮಾಜವಾದಿಗಳ ನೇತೃತ್ವದಲ್ಲಿ ನಡೆದ ಕರ್ನಾಟಕದ ಕಾಗೋಡು ರೈತ ಹೋರಾಟಕ್ಕೆ ಈತನ ತತ್ವಾದರ್ಶಗಳೇ ಬುನಾದಿಯಾಗಿದ್ದವು. 80ರ ದಶಕದ ದಲಿತ ಮತ್ತು ರೈತ ಚಳವಳಿಗಳು ಅಂತರಂಗದಲ್ಲಿ ಅಹಿಂಸೆ ಹಾಗೂ ಸತ್ಯಾಗ್ರಹದ ತತ್ವಗಳನ್ನು ಕರಗಿಸಿಕೊಂಡು ನಡೆಸಿದ ನೈತಿಕ ಹೋರಾಟಗಳು ನಮ್ಮ ರೆಪ್ಪೆ ತುದಿಯಲ್ಲಿವೆ. ಕೊಡಗಿಗೆ ಈ ಮಹಾತ್ಮ ಬಂದಾಗ ಕನ್ನಡದ ಹೆಮ್ಮೆಯ ಕಥೆಗಾರ್ತಿ ಕೊಡಗಿನ ಗೌರಮ್ಮ ತನ್ನಲ್ಲಿದ್ದ ಒಡವೆಗಳನ್ನೆಲ್ಲಾ ಸ್ವೀಕರಿಸಬೇಕು ಎಂದು ಕಠೋರ ಸತ್ಯಾಗ್ರಹಿಯ ಮುಂದೆಯೇ ಸತ್ಯಾಗ್ರಹ ಆರಂಭಿಸಿ, ಇನ್ನೆಂದೂ ತಾನು ಒಡವೆಗಳನ್ನು ಧರಿಸುವುದಿಲ್ಲ ಎಂದು ಮಹಾತ್ಮನಿಗೆ ಹೇಳಿದ ಘಟನೆಯೂ ನಡೆದಿದೆ. ಭಾರತದಲ್ಲಿ ಕ್ರೈಸ್ತ ಧರ್ಮಪ್ರಚಾರಕ್ಕೆಂದು ಬಂದಿದ್ದ ಪ್ರಖ್ಯಾತ ಮಾನವಶಾಸ್ತ್ರಜ್ಞ ವೆರಿಯರ್ ಎಲ್ವಿನ್‌ರಲ್ಲಿ ಆದಿವಾಸಿ ಜನಾಂಗಗಳ ಬಗ್ಗೆ ಇದ್ದ ಅಪಾರವಾದ ಆಸಕ್ತಿಯನ್ನು ಕಂಡು, ಆತನನ್ನು ಮಧ್ಯಪ್ರದೇಶದ ಬೈಗಾ ಮತ್ತು ಗೊಂಡಾ ಆದಿವಾಸಿಗಳ ಜೀವನವಿಧಾನಗಳನ್ನು ಆಳವಾಗಿ ಅರಿಯಲು ಕಳುಹಿಸಿಕೊಟ್ಟದ್ದು ಇದೇ ಮಹಾತ್ಮ. ಈತನಿಂದ ಪ್ರೇರಣೆಗೊಂಡು ಸಮಾಜ ಸುಧಾರಣೆಗೆ ಹಾಗೂ ಸ್ವಾತಂತ್ರ್ಯದ ಹೋರಾಟಕ್ಕೆ ಧುಮುಕಿದ ಸಾವಿರಾರು ಅನಾಮಿಕರ ಕಥನಗಳು ಇನ್ನೂ ಬೆಳಕುಕಂಡಿಲ್ಲ! ಈಚೆಗೆ ಪಿ. ಸಾಯಿನಾಥ್ ಅವರ 'ಕೊನೆಯ ಹೀರೊಗಳು' (ಅನು: ಜಿ.ಎನ್. ಮೋಹನ್) ಕೃತಿ ಇಂತಹ ಅಜ್ಞಾತ ಸ್ವಾತಂತ್ರ್ಯ ಹೋರಾಟದ ಕಾಲಾಳುಗಳ ಬಗ್ಗೆ ಕೊಂಚಮಟ್ಟಿನ ಬೆಳಕು ಚೆಲ್ಲುತ್ತದೆ.

ಹೀಗೆ ಈತ ಚಿವುಟಿದಷ್ಟೂ ಕೊನರುವ ಅಮೃತಬಳ್ಳಿಯಂತೆ! ಮಹಾತ್ಮನನ್ನು ಕುರಿತು ವೆರಿಯರ್ ಎಲ್ವಿನ್ ಹೇಳಿದ ಕೊನೆಯ ಮಾತು ಹೀಗಿದೆ: 'ಅವರು ಮುಟ್ಟಿದ ಪ್ರತಿಯೊಂದು ವಸ್ತುವಿಗೂ ಹೊಸ ಚೈತನ್ಯವನ್ನು ನೀಡಿದರು'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಎಂತಹ ಕಟು ಅನುಭವ ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿ ಆಗಿರೋ ರಹಸ್ಯ.
  —ದ.ರಾ. ಬೇಂದ್ರೆ
- ಬುದ್ಧಿಯ ಜ್ಞಾನ ಬೇರೆ, ಹೃದಯದ ಜ್ಞಾನ ಬೇರೆ.
  —ಜಿ.ಪಿ. ರಾಜರತ್ನಂ
- ಅಪ್ರಿಯವಾದರೂ ಸತ್ಯವನ್ನು ಹೇಳಬೇಕಾದುದು ಹಿತೈಷಿಯ ಧರ್ಮ.
  —ಅನಕೃ
- ಸಹನೆಗಿಂತ ಮಿಗಿಲಾದ ಶಿಸ್ತಿನ ನಿಯಮವಿಲ್ಲ, ಸಹನೆಯು ತಪಗಳಲ್ಲೇ ಶ್ರೇಷ್ಠವಾದುದು. ಸಹನೆಗಿಂತ ಮಿಗಿಲಾದ ಶ್ರೇಷ್ಠ ಗುಣ ಇನ್ನೊಂದಿಲ್ಲ. ಯಾರ ಬಲವು ಸಹನೆಯೋ ಆತನೇ ಶ್ರೇಷ್ಠ.
  —ಗೌತಮ ಬುದ್ಧ
- ನಮ್ಮ ನಮ್ಮ ಮನಸ್ಸೇ ನಮಗೆ ದೇವರು. ಇನ್ನಾವ್ದೂ ಅಲ್ಲ, ಇನ್ನಾರೂ ಅಲ್ಲ.
  —ಕುವೆಂಪು
- ಕನ್ನಡ ತಾಯಿಗೆ ಮಣಿವ ನಾವ್ ಕನ್ನಡಿಗರೆಂದು ಕುಣಿವ.
  —ರಾಘವ
- ಸಂತೋಷ ಹೊರಗಿನಿಂದ ಬರುವುದಿಲ್ಲ. ಅದನ್ನು ನಮ್ಮ ಮನಸ್ಸಿನಲ್ಲಿ ನಾವು ಕಂಡುಕೊಳ್ಳಬೇಕು.
  —ಚದುರಂಗ
- ತುಕ್ಕು ಹಿಡಿದು ಹೋಗಬೇಡ, ತೇದು ಹೋಗು.
  —ಸರ್.ಎಂ. ವಿಶ್ವೇಶ್ವರಯ್ಯ